# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.08.2011**

ದಿನಾಂಕ: 20.08.2011 ರಂದು ದಿ|| ಬಚ್ಚೇಗೌಡ ಸ್ಮಾರಕ ಭವನ, ಬಳ್ಳಾರಿ ರಸ್ತೆ, ಯಲಹಂಕದಲ್ಲಿ ಯಲಹಂಕ ವಲಯ ವ್ಯಾಪ್ತಿಯಲ್ಲಿ ಗುರುತಿಸಲಾಗಿದ್ದ 133 ನಿರ್ಗತಿಕ / ರಾತ್ರಿ ವಸತಿ ರಹಿತ ನಾಗರಿಕರಿಗೆ ಗುರುತಿನ ಚೀಟಿ ಹಾಗೂ ವೈದ್ಯಕೀಯ ತಪಾಸಣೆ ಕಾರ್ಯಕ್ರಮವನ್ನು ಯಲಹಂಕ ವಲಯದ ಜಂಟಿ ಆಯುಕ್ತರಾದ ಶ್ರೀ ಎಲ್. ರಬೀಂದ್ರ ರವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ, ನಿರ್ಗತಿಕ ನಾಗರಿಕರಿಗೆ ಗುರುತಿನ ಚೀಟಿಯನ್ನು ವಿತರಿಸಿದರು.

ಶ್ರೀಮತಿ ಸವಿತ, ವೈದ್ಯಾಧಿಕಾರಿಗಳು, ಬ್ಯಾಟರಾಯನಪುರ ರವರ ನೇತೃತ್ವದಲ್ಲಿ ನುರಿತ ವೈದ್ಯರುಗಳಿಂದ ಕಣ್ಣು, ಕಿವಿ, ಗಂಟಲು, ಬಿ.ಪಿ, ಮಧುಮೇಹ ಇತರೇ ಬಗ್ಗೆ ವೈದ್ಯಕೀಯ ತಪಾಸಣೆ ಮಾಡಿಸಲಾಯಿತು.

ಈ ಸಮಾರಂಭದಲ್ಲಿ ಯಲಹಂಕ ವಲಯದ ವಾರ್ಡ್ ನಂ.11ರ ಸದಸ್ಯರಾದ ಶ್ರೀಮತಿ ಯಶೋಧಮ್ಮ ರವರು ಹಾಗೂ ಉಪ ಆಯುಕ್ತರು, ಎನ್.ಜಿ.ಓ. ಗಳ ಪರವಾಗಿ ಗಿಲ್‌ಗಾಲ್ ಸಂಸ್ಥೆಯ ಶ್ರೀ ಸಂಪತ್‌ಕುಮಾರ್, ಐ.ಪಿ.ಡಿ.ಪಿ. ಸಂಸ್ಥೆಯ ಶ್ರೀ ಭೀಮಾ ಮತ್ತು ನಿರಂತರ ಸಂಸ್ಥೆಯ ಶ್ರೀ ಗೋಪಿನಾಥ್ ರವರು ಸಭೆಯಲ್ಲಿ ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 22.08.2011**

## *ಲಕ್ಕಸಂದ್ರ ಕ್ವಾರಿ ಪಿಟ್ ಅಭಿವೃದ್ಧಿಗೆ ಆಯುಕ್ತರ ಆದೇಶ*

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ವಾರ್ಡ್ ನಂ.145 ಹೊಂಬೇಗೌಡನಗರ ವ್ಯಾಪ್ತಿಯಲ್ಲಿ ಬರುವ ಲಕ್ಕಸಂದ್ರ ಕ್ವಾರಿ ಪಿಟ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು. ಇದನ್ನು ಅಭಿವೃದ್ಧಿಗೊಳಿಸಲು ಸಮಗ್ರ ಯೋಜನಾ ವರದಿ ತಯಾರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ನಿರ್ದೇಶಿಸಿದರು.

ಸದರಿ ಪ್ರದೇಶದಲ್ಲಿ ನಿರ್ಮಿಸಿರುವ ಈಜು ಕೊಳವನ್ನು ಯಥಾಸ್ಥಿತಿಯಲ್ಲಿ ಹೊರಗುತ್ತಿಗೆ ನೀಡಲು ಕ್ರಮವಹಿಸಲು ಸೂಚಿಸಿ, ಸುಮಾರು 8.70 ಎಕರೆ ವಿಸ್ತೀರ್ಣವಿರುವ ಲಕ್ಕಸಂದ್ರ ಕ್ವಾರಿ ಪಿಟ್ ಪ್ರದೇಶದಲ್ಲಿ ಹಾಲಿ ಇರುವ ಈಜು ಕೊಳದ ಸುತ್ತಲು ಕಾಂಪೌಂಡ್ ನಿರ್ಮಿಸಿ, ಉಳಿದ ಸಮದಟ್ಟವಾದ ಪ್ರದೇಶವನ್ನು ತೆರೆದ ಮೈದಾನ ಮಾಡಲು ಹಾಗೂ ಎತ್ತರದ ಪ್ರದೇಶ ಸುಮಾರು 5.00 ಎಕರೆ ಜಾಗವನ್ನು ವೃಕ್ಷ ಉದ್ಯಾನವನ (Tree Park) ಮಾಡಿ ಸುತ್ತಲೂ ಪಾದಚಾರಿ ಮಾರ್ಗ ನಿರ್ಮಿಸುವಂತೆ ಒಟ್ಟು 3 ಭಾಗಗಳಾಗಿ ವಿಂಗಡಿಸಿ, ಯೋಜನಾ ವರದಿ ತಯಾರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಿದರು. ಇದರಿಂದ ಈ ಕ್ವಾರಿ ಪಿಟ್ ಸ್ಥಳವನ್ನು ಉತ್ತಮಪಡಿಸಿ ಈ ಪ್ರದೇಶದಲ್ಲಿ ಸ್ವಚ್ಛತೆ ಕಾಪಾಡುವುದರಿಂದ ಸ್ಥಳೀಯ ನಾಗರಿಕರಿಗೆ ಒಳ್ಳೆಯ ಪರಿಸರ ಕಲ್ಪಿಸಿದಂತಾಗುತ್ತದೆ ಎಂದು ಆಯುಕ್ತರು ತಿಳಿಸಿದರು.

ಈ ಸಂದರ್ಭದಲ್ಲಿ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಡಿ. ಚಂದ್ರಪ್ಪ ಮತ್ತು ಕಾರ್ಯಪಾಲಕ ಅಭಿಯಂತರರಾದ ಶ್ರೀ ರಾಜೇಶ್ ಹಾಗೂ ಮುಂತಾದವರು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**